

# ಮಿರಾಕಲ್ ಮ್ಯಾನ್

■ ಪ್ರವೀಣ ಕುಲಕರ್ಣಿ

‘ಗುರಿಯನ್ನು ತಲುಪುವ ತೀವ್ರ ಹಂಬಲವಿದ್ದವರು ಸಾಗರದ ಮೇಲೆ ಸಣ್ಣ ಸಣ್ಣ ಕಲ್ಲಿನ ಹರಳುಗಳಿಂದಲೇ ಸೇತುವೆ ಕಟ್ಟಬಲ್ಲರು’ ಎಂಬರ್ಥದ ಇಂಗ್ಲಿಷ್ ಗಾದೆಯೊಂದಿದೆ. ಈ ಗಾದೆಮಾತು ಕೇಳಲು ಸೋಜಿಗ ಎನಿಸುವುದಲ್ಲವೇ? ಆದರೆ, ಈ ಮಾತಿನಂತೆ ನಡೆಯುತ್ತಿರುವ ಹಲವು ವ್ಯಕ್ತಿಗಳು ನಮ್ಮ ನಡುವೆ ಇದ್ದಾರೆ ಗೊತ್ತೆ? ಆರ್ಮ್‌ಸ್ಟ್ರಾಂಗ್ ಪಾಮೆ ಅಂತಹ ವಿರಳ ಸಾಧಕರಲ್ಲಿ ಒಬ್ಬರು. ಆರ್ಮ್‌ಸ್ಟ್ರಾಂಗ್, 2009ರ ಬ್ಯಾಚ್‌ನ ಐಎಎಸ್ ಅಧಿಕಾರಿ. ಸರ್ಕಾರದ ನಯಾಪೈಸೆ ಸಹಾಯಧನವಿಲ್ಲದೆ ಈ ಅಧಿಕಾರಿ ಮಣಿಪುರದ ತೌಸೆಮ್ ಮತ್ತು ತಮೆಂಗ್‌ಲಾಂಗ್ ಎಂಬ ಎರಡು ಊರುಗಳ ಮಧ್ಯೆ 100 ಕಿ.ಮೀ. ಉದ್ದದ ರಸ್ತೆ ನಿರ್ಮಿಸಿದ್ದಾರೆ. ಈ ರಸ್ತೆಗೆ ‘ಪೀಪಲ್ಸ್ ರೋಡ್’ ಎಂದೇ ಅವರು ನಾಮಕರಣ ಮಾಡಿದ್ದಾರೆ. ಮಣಿಪುರ, ನಾಗಾಲ್ಯಾಂಡ್ ಮತ್ತು ಅಸ್ಸಾಂ ಮೂರೂ ರಾಜ್ಯಗಳನ್ನು ಸಂಪರ್ಕಿಸುವ ಈ ರಸ್ತೆ ಇದೀಗ ಹಲವು ಬುಡಕಟ್ಟು ಜನವಸತಿಗಳ ಪಾಲಿಗೆ ಜೀವನಾಡಿಯೇ ಆಗಿದೆ.

ಆರ್ಮ್‌ಸ್ಟ್ರಾಂಗ್ ಮಣಿಪುರದ ಮಣ್ಣಿನ ಮಗ. ಜನರ ಸಂಕಷ್ಟಗಳನ್ನು ನೋಡುತ್ತಾ, ಸ್ವತಃ ಅನುಭವಿಸುತ್ತಾ ಬೆಳೆದವರು. ರಸ್ತೆಯಿಲ್ಲದ ಕುಗ್ರಾಮಗಳ ಜನರ ಬದುಕನ್ನು ಸುಧಾರಿಸಲು ಏನಾದರೂ ಮಾಡಬೇಕು ಎಂಬ ಕನಸು ಕಂಡವರು. ಪಟ್ಟು ಹಿಡಿದು ಓದಿದ ಅವರು, ಲೋಕಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಐಎಎಸ್ ಅಧಿಕಾರಿಯಾದರು. ತವರಿನ ಕೇಡರ್ ಸಿಕ್ಕಿದ್ದರಿಂದ ಮತ್ತಷ್ಟು ಹಿಗ್ಗಿದ ಆರ್ಮ್‌ಸ್ಟ್ರಾಂಗ್ ಕಣ್ಣುಗಳೊಳಗೆ, ಬಾಲ್ಯದಲ್ಲಿ ಕಂಡ ಕನಸು ಮತ್ತೆ ದೂಳು ಕೊಡವಿಕೊಂಡು ಪುಟಿದೆದ್ದು ನಿಂತಿತು. ತೌಸೆಮ್ ಭಾಗದ ವಿಭಾಗಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಅವರು, ಜನ ರಸ್ತೆಯಿಲ್ಲದೆ ಅನುಭವಿಸುತ್ತಿರುವ ಸಂಕಷ್ಟದ ಕುರಿತು ಸರ್ಕಾರಕ್ಕೆ ಸುದೀರ್ಘವಾದ ಪತ್ರವೊಂದನ್ನು ಬರೆದರು. ಬೆನ್ನಹಿಂದೆಯೇ ರಸ್ತೆ ನಿರ್ಮಾಣದ ಪ್ರಸ್ತಾವವನ್ನೂ ಒಯ್ದರು. ಹಣಕಾಸಿನ ಕೊರತೆಯನ್ನು ಮುಂದೆ ಮಾಡಿದ ಸರ್ಕಾರ ಪ್ರಸ್ತಾವವನ್ನು ತಿರಸ್ಕರಿಸಿತು.

ಬಹುಶಃ ಬೇರೆ ಯಾವುದೇ ಅಧಿಕಾರಿಯಾಗಿದ್ದರೆ, ‘ನನ್ನ ಕೈಯಲ್ಲಾದ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಕೈಮೀರಿದ ವಿದ್ಯಮಾನಗಳನ್ನು ಹೇಗೆ ನಿಭಾಯಿಸುವುದು’ ಎಂದು ಸುಮ್ಮನಾಗುತ್ತಿದ್ದರೇನೋ. ಆದರೆ, ಆರ್ಮ್‌ಸ್ಟ್ರಾಂಗ್ ಕೈಕಟ್ಟಿ ಕೂರಲಿಲ್ಲ. ಫೇಸ್‌ಬುಕ್‌ನಲ್ಲಿ ಜನರ ಸಮಸ್ಯೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಲು ಒಂದು ‘ಶ್ವೇತಪತ್ರ’ ಪ್ರಕಟಿಸಿದರು. ‘ಸಮಾನಮನಸ್ಕರು ನೆರವು ನೀಡಿದರೆ ಈ ಜನರ ಕಣ್ಣೀರು ಒರೆಸಬಹುದು. ಕೊಟ್ಟ ಒಂದೊಂದು ಪೈಸೆಯೂ ಸದುದ್ದೇಶಕ್ಕೆ ಖರ್ಚಾಗುತ್ತದೆ. ಅಪವ್ಯಯದ ಮಾತೇ ಇಲ್ಲ. ನಿಮ್ಮಿಂದ ಎಷ್ಟು ಸಹಾಯ ಸಿಗಬಹುದು’ ಎಂದು ಬರೆದರು. ನೋಡನೋಡುತ್ತಿದ್ದಂತೆ 40 ಲಕ್ಷ ರೂಪಾಯಿ ಜಮಾವಣೆ ಆಯಿತು. ದುಡ್ಡು ಕೊಡಲಾಗದ ಸ್ಥಳೀಯರು ಶ್ರಮದಾನ ಮಾಡಲು ಮುಂದೆ ಬಂದರು. ದುಡ್ಡು ಕೊಡುವವರು, ಶ್ರಮದಾನ ಮಾಡುವವರು ಮುಂದೆ ಬಂದಿದ್ದನ್ನು ನೋಡಿ, ರೋಡ್ ರೋಲರ್‌ಗಳು ಸೇರಿದಂತೆ ಹಲವು ವಾಹನಗಳ ಮಾಲೀಕರು ಉಚಿತ ಸೇವೆ ನೀಡುವುದಾಗಿ ಘೋಷಿಸಿದರು. ನೋಡನೋಡುತ್ತಿದ್ದಂತೆ ನೂರು ಕಿ.ಮೀ. ಉದ್ದದ ರಸ್ತೆ ನಿರ್ಮಾಣವಾಗಿಬಿಟ್ಟಿತು. ಸುಮಾರು 30 ಹಳ್ಳಿಗಳ ಜನರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಆರ್ಮ್‌ಸ್ಟ್ರಾಂಗ್ ಅವರು ಇಲ್ಲಿ ರಸ್ತೆ ನಿರ್ಮಾಣಕ್ಕೆ ಮುಂಚೆ ಹಳ್ಳಿಗಳ ಜನರ ಪಾಡು ನರಕಸದೃಶವಾಗಿತ್ತು. ಮಳೆಯಲ್ಲಿ ಅವರ ಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಿತ್ತು. ಒಂದು ರೀತಿಯಲ್ಲಿ ಹೊರಜಗತ್ತಿನೊಂದಿಗೆ ಈ ಹಳ್ಳಿಗಳು ಸಂಪರ್ಕವನ್ನೇ ಕಡಿದುಕೊಂಡಿದ್ದವು. ಹತ್ತಿರದ ಪಟ್ಟಣಕ್ಕೆ ಹೋಗಲು ಅನಿವಾರ್ಯವಾಗಿ ಜನ ಅಪಾಯ ಲೆಕ್ಕಿಸದೆ ನದಿ ದಾಟಬೇಕಿತ್ತು. ಯಾರಾದರೂ ಅನಾರೋಗ್ಯಪೀಡಿತರಾದರೆ ಬಿದಿರಿನ ಸ್ಟ್ರೆಚರ್‌ನಲ್ಲಿ ಹೊತ್ತು, ನದಿ ದಾಟಿಕೊಂಡು ಆಸ್ಪತ್ರೆಗೆ ತೆರಳಬೇಕಿತ್ತು. ಈಗ ಎಲ್ಲ ಸಮಸ್ಯೆಗಳೂ ದೂರವಾದ ನೆಮ್ಮದಿಯಲ್ಲಿ ಆ ಹಳ್ಳಿಗರು ಇದ್ದಾರೆ.

ಆರ್ಮ್‌ಸ್ಟ್ರಾಂಗ್, ನೆರವು ನೀಡಲು ಮನವಿ ಮಾಡಿ ಸುಮ್ಮನೇ ಕೂರಲಿಲ್ಲ. ಮೊದಲ ವಂತಿಗೆಯಾಗಿ ₹ 5 ಲಕ್ಷ ಕೊಟ್ಟರು. ಅವರ ಸಹೋದರ ₹ 1 ಲಕ್ಷ ಕೊಟ್ಟರೆ, ತಂದೆ–ತಾಯಿ ಒಂದು ತಿಂಗಳ ಪಿಂಚಣಿಯನ್ನು ದೇಣಿಗೆ ರೂಪದಲ್ಲಿ ಕೊಟ್ಟರು. ಕುಟುಂಬವೊಂದು ಸಮಾಜ ಸೇವೆಗಾಗಿ ಹೀಗೆ ದೊಡ್ಡ ದೇಣಿಗೆ ಕೊಟ್ಟಾಗ ಉಳಿದವರೂ ವಿಶ್ವಾಸದಿಂದ ನೆರವು ನೀಡಿದರು. ಕೇವಲ 7–8 ದಿನಗಳಲ್ಲಿ ರಸ್ತೆ ನಿರ್ಮಾಣಕ್ಕೆ ಬೇಕಾದ ಮೊತ್ತ ಶೇಖರಣೆಗೊಂಡಿತು. ‘ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎಂದು ಕೈಕಟ್ಟಿ ಕುಳಿತರೆ ನಾವು ಅಂದುಕೊಂಡ ಬದಲಾವಣೆ ತರಲು ಸಾಧ್ಯವಾಗದು. ಆಡಳಿತ ವ್ಯವಸ್ಥೆ ಮತ್ತು ಜನರ ಅಗತ್ಯದ ನಡುವಿನ ಅಂತರವನ್ನು ಕಡಿಮೆ ಮಾಡಲು ನಮ್ಮಿಂದ ಸಾಧ್ಯವಾದ ಕೆಲಸ ಮಾಡಬೇಕು. ಈ ಸರಳಸೂತ್ರವೇ ರಸ್ತೆ ನಿರ್ಮಾಣ ಯೋಜನೆಗೆ ನನ್ನನ್ನು ಪ್ರೇರೇಪಿಸಿತು’ ಎನ್ನುತ್ತಾರೆ ಆರ್ಮ್‌ಸ್ಟ್ರಾಂಗ್. ‘ಜನರ ಈ ರಸ್ತೆ ಈಗ 30 ಹಳ್ಳಿಗಳ ಆರ್ಥಿಕ ಜೀವನಾಡಿಯಾಗಿದೆ. ಆರೋಗ್ಯದ ಸಮಸ್ಯೆಗಳನ್ನೂ ಹೋಗಲಾಡಿಸಿದೆ. ಈ ಹಳ್ಳಿಗಳ ಬದುಕೇ ಬದಲಾಗಿದೆ. ಇದಕ್ಕಿಂತ ಸಾರ್ಥಕ ಕ್ಷಣ ಯಾವುದಿದೆ’ ಎಂದು ಅವರು ಪ್ರಶ್ನಿಸುತ್ತಾರೆ.

ರಸ್ತೆ ಇಲ್ಲದಿದ್ದಾಗ ಹಳ್ಳಿಗಳ ಬದುಕು ಹೇಗೆ ಸಾಗುತ್ತಿದೆ ಎಂಬುದನ್ನು ತಿಳಿಯಲು ಆರ್ಮ್‌ಸ್ಟ್ರಾಂಗ್, 30 ಹಳ್ಳಿಗಳಿಗೂ ಕಾಲ್ನಡಿಗೆಯಲ್ಲಿ ಸಾಗಿ, ಅಲ್ಲಿ ವಾಸವಿದ್ದು, ಖುದ್ದು ಅವರ ಸಮಸ್ಯೆಗಳನ್ನು ಕಂಡರು. ಊಟಕ್ಕೆ ಬೇಕಾದ ಅಕ್ಕಿ ಮೂಟೆಯನ್ನು ಹಲವು ಕಿಲೋಮೀಟರ್‌ಗಳ ದೂರದಿಂದ ಹೆಗಲ ಮೇಲೆ ಹೊತ್ತು ಕಾಡಿನ ದಾರಿಯಲ್ಲಿ ನಡೆದು ಬರುವುದನ್ನು, ಅಕ್ಕಿ ತರಲು ಹೋದವರು ಯಾವಾಗ ಬರುತ್ತಾರೆಂದು ಮನೆಯಲ್ಲಿ ಒಲೆ ಉರಿಸದೆ ಬಾಗಿಲಲ್ಲೇ ಕಾದು ಕುಳಿತ ಮಹಿಳೆಯರನ್ನು ಕಂಡು ಕಣ್ಣೀರಾದರು. ‘ನಿಮಗೆ ಏನು ಬೇಕು’ ಎಂದು ನಾನು ಅವರನ್ನು ಕೇಳಿದೆ. ಎಲ್ಲರದ್ದೂ ಒಂದೇ ಬೇಡಿಕೆಯಾಗಿತ್ತು. ‘ವಾಹನ ಓಡಾಡುವಂತಹ ಒಂದು ರಸ್ತೆ ನಿರ್ಮಿಸಿ, ಪುಣ್ಯ ಕಟ್ಟಿಕೊಳ್ಳಿ’ ಎಂದು ಒಕ್ಕೊರಲ ಮನವಿ ಮಾಡಿದರು. ಆರ್ಮ್‌ಸ್ಟ್ರಾಂಗ್ ಅವರ ನಿರ್ಧಾರ ಗಟ್ಟಿಯಾಗಲು ಅಲ್ಲಿನ ಸ್ಥಿತಿ ಕಾರಣವಾಯಿತು. ಅವರು ನಿಧಿ ಸಂಗ್ರಹಿಸಿ ರಸ್ತೆ ನಿರ್ಮಾಣ ಮಾಡಲು ನಿರ್ಧರಿಸಿದಾಗ ಭಾರತ ಮಾತ್ರವಲ್ಲದೆ ಜಗತ್ತಿನ ಹಲವು ಭಾಗಗಳಲ್ಲಿ ನೆಲೆಸಿರುವ ಭಾರತೀಯರಿಂದಲೂ ನೆರವು ಹರಿದುಬಂತು.

ಆರ್ಮ್‌ಸ್ಟ್ರಾಂಗ್ ಅವರನ್ನು ಕೆಲವರು ಹುಚ್ಚ ಎಂದು ಕರೆದರು. ಆದರೆ, ಅವರು ಅದಕ್ಕೆ ತಲೆ ಕೆಡಿಸಿಕೊಳ್ಳಲಿಲ್ಲ. ‘ಹೌದು, ನಾನು ಒಂದು ರೀತಿಯಲ್ಲಿ ಹುಚ್ಚನೇ ಆಗಿದ್ದೆ. ಈ ರಸ್ತೆ ನಿರ್ಮಾಣವಾಗುವವರೆಗೆ ವಿರಮಿಸುವುದಿಲ್ಲ ಎಂಬ ಶಪಥ ಮಾಡಿದ್ದೆ’ ಎಂದು ಅವರು ನೆನೆಯುತ್ತಾರೆ. ಹಿಂದೆ ಹುಚ್ಚ ಎಂದು ಕರೆದ ಜನರೇ ಈಗ ಅವರನ್ನು ಮಿರಾಕಲ್ ಮ್ಯಾನ್ ಎಂದು ಕರೆಯುತ್ತಿದ್ದಾರೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65